jointly with the representative of their Government.

Sri H. C. LINGA REDDY.—Was the work included in the First Five-Year Plan ?

Sri H. K. VEERANNA GOWDH.—It was included in the First Five-Year Plan and subsequently it was not included in the Second Five-Year Plan, because there was no agreement between the State Government and the Andhra Government.

Sri H. C. LINGA REDDY.—Will the State Government recommend to the Planning Commission itself to move the Andhra Government for the work being taken up ?

Sri H. K. VEERANNA GOWDH.—That is also under consideration of Government—to request the Centre to interfere in this matter and allow us to construct this tank.

ಶ್ರೀ ಎ. ಮುನಿಯಪ್ಪ.—ಈಗ ಒಡೆದು ಹೋಗಿರ ತಕ್ಕ ಕೆರೆಯನ್ನು ನರಿಪಡಿಸಿ ಕೊಡಿ ಎಂದು ಕೇಳಿದ್ದಕ್ಕೆ ಏನು ಉತ್ತರ ಕೊಟ್ಟ ಹಾಗಾಯಿತು ?

ಅಧ್ಯಕ್ಷರು.—ಆ ಪ್ರಶ್ನೆಗೆ ಕೊಡತಕ್ಕ ಉತ್ತರ ಹಾಗೆ ಇರುತ್ತದೆ ; ಆದ್ದರಿಂದ ಆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎ. ಮುನಿಯಪ್ಪ.—ಮೊದಲು ಕೆರೆ ಕಟ್ಟುವಾಗ ಆಂಧ್ರ ಸರ್ಕಾರದವರು ಮತ್ತು ನಮ್ಮ ಸರ್ಕಾರದ ವರು ಇಬ್ಬರೂ ಸೇರಿ ಮಾತನಾಡಿಕೊಂಡನಂತರ ತಾನೆ ಈ ಕೆರೆ ಕಟ್ಟಿದ್ದು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದೇ ಬೇರೆ ಪ್ರಶ್ನೆ ಆಯಿತು. ಆದರೆ ಈ ಕೆರೆಯನ್ನು ಕಟ್ಟಬೇಕಾ ಗಿದ್ದರೆ ಅದೊಂದೇ ಪ್ರಾಥಾನ್ಯವಾದ ವಿಚಾರವಲ್ಲ. ಆಲೋಚಿನತಕ್ಕ ವಿಚಾರಗಳು ಇನ್ನೂ ಅನೇಕ ಇರು ತ್ತವೆ. ಈಗ ಈ ಕೆರೆಯ ದುರುಸ್ತಿಗಾಗಿ ಇಷ್ಟೊಂದು ಅಪಾರ ಹಣವನ್ನು ಖರ್ಚು ಮಾಡಿದರೆ 7-8 ಗ್ರಾಮ ಗಳಿಗೆ ಸಾಕಷ್ಟು ನೀರು ನರಬರಾಯಿ ಆಗುತ್ತದೆಯೇ ಅಥವಾ ಇಲ್ಲವೇ ಎಂಬ ವಿಚಾರಗಳನ್ನೆಲ್ಲಾ ಸಂಪೂರ್ಣ ವಾಗಿ ಪರಿಶೀಲನೆ ಮಾಡದೆ ಯಾವುದನ್ನೂ ಹೇಳುವುದ ಕ್ಕಾಗುವುದಿಲ್ಲ. ಹೀಗಿರುವಾಗ ನಾವು ಆಂಧ್ರ ಸರ್ಕಾರದವರ ಒಪ್ಪಿಗೆ ಪಡೆಯದೆ ಈ ಕೆಲಸ ಮಾಡಲು ಆಗುವುದಿಲ್ಲ.

Construction of Gorur Anecut.

Q.—119. **Sri N. G. NARASIMHE GOWDA** (Sravanabelagola).—

Will the Government be pleased to state :—

(*a*) whether it is a fact that for the last 50 years the people of Hassan District have been urging them to construct the Gorur Anecut ;

(*b*) whether they are aware of the fact that the Gorur Anecut, when completed, would to a large extent benefit the ryots of Channarayapatna Taluk, Turuvekere Taluk, Nagamangala Taluk and Tiptur Taluk ;

(*c*) whether they propose to recommend immediately to the Government of India to include the construction of the above anecut in the Second Five-Year Plan ;

(*d*) whether they are also aware of the fact that when this anecut is constructed, it will undoubtedly improve the economic condition of the ryots of all the three districts, besides improving food position ?

A.—**Sri H. K. VEERANNA GOWDH** (Minister for Public Works).—

(*a*) There have been representations for the construction of a reservoir as well as against its construction.

(*b*) The lands of the following Taluks are expected to be benefited.—

1 Arkalgud
2 Holenarasipur
3 Krishnarajapet
4 Chennarayapatna
5 Hassan

(*c*) It is not proposed to include this in the Second Five-Year Plan.

(*d*) Yes, as in the case of all such irrigation projects.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ಗೊರೂರು ಅಣೆಕಟ್ಟಿನ ಅಂದಾಜನ್ನು ಯಾವಾಗ ತಯಾರಿಸಲಾ ಯಿತು ?

*ಶ್ರೀ ಎಚ್. ಕೆ. ವಿರಣ್ಣಗೌಡ.—ತಾರೀಖು ಇಲ್ಲ ನಮೂದಾಗಿಲ್ಲ, ನೋಟೀಸ್ ಬೇಕು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಇದರಿಂದ ಎಷ್ಟು ಸಾವಿರ ಎಕರೆಗೆ ನೀರು ನರಬರಾಯಿ ಆಗುತ್ತದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—3,500 ಎಕರೆಗೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಅದುನರಿಯಲ್ಲ 35,000 ಎಕರೆಗೆ ನೀರು ನರಬರಾಯಿ ಆಗುತ್ತದೆಂದು ತಿಳಿಸಿದರೆ ಒಪ್ಪುತ್ತೀರಾ ? ಈ ರೀತಿ ಪ್ಲಾನಿನಲ್ಲಿ ನಮೂ ದಾಗಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ವಿಚಾರಗಳೆಲ್ಲ ನಮಗೆ ಸಂಪೂರ್ಣವಾಗಿ ಗೊತ್ತಿದೆಯೆಂದು ಆಯಿತು. ನಾನು ಈ ಮೊದಲೇ ಹೇಳಿದ್ದು ಒಂದು ಛಾನಲ್‌ಗೆ ಸೇರಿದ್ದ ಜಮೀನನ್ನು ಮಾತ್ರ ತಿಳಿಸಿದ್ದೆ. ಈಗ ತಾವು ಹೇಳಿದ್ದೇ ಸರಿಯಾದದ್ದು. ಎರಡು ಛಾನಲ್‌ಗಳ ಒಟ್ಟು ಅಚ್ಚುಕಟ್ಟು 35,500 ಎಕರೆಗಳು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ಕಾಮಗಾರಿಯನ್ನು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಕೊಳ್ಳಬೇಕೆಂದು ಜನರು ಬಹಳ ಕಾಲದಿಂದಲೂ ಒತ್ತಾಯಪಡಿಸುತ್ತಿರುವ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಂದಿದೆ. ಆದರೆ ಇನ್ನು ಕೆಲವು ಬೇರೆ ಕಾರಣಗಳಿಂದ ಇದನ್ನು ಕೈಬಿಡ ರಾಯಿತು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಆ ಕಾರಣ ಗಳೇನು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಕೆರೆ ಕಟ್ಟು ವುದರಿಂದ ಅನೇಕ ಜಮೀನುಗಳು ಮತ್ತು 33 ಗಾವು ಗಳು ಮುಳುಗಡೆಯಾಗುತ್ತವೆಂಬ ತಕರಾರು ಬೇರೆ ಬಂದಿತು. ಹೀಗೆ ಕೆಲವರು ಈ ಕೆರೆಯನ್ನು ಕಟ್ಟಿಸಿಕೊಡ ಬೇಕೆಂದು ಕೇಳುತ್ತಿದ್ದರೆ ಮತ್ತೆ ಕೆಲವರು ಕಟ್ಟಿನ ಕೂಡದೆಂದು ತಕರಾರು ಹಾಕಿದ್ದಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಆ ರೀತಿ ಯಾವ ಜಮೀನುಗಳೂ ಮತ್ತು ಗ್ರಾಮಗಳೂ ಮುಳುಗಡೆಯಾಗ ದಂತೆ ಯಾವ ಪ್ರಾಜೆಕ್ಟ್‌ಗಳನ್ನೂ ಕಟ್ಟಲು ಸಾಧ್ಯವಿಲ್ಲ ವೆಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಗೊತ್ತಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಮಂತ್ರಿಗಳು ಈಗ ತಾನೇ ಈಕೆರೆಯ ಅಚ್ಚುಕಟ್ಟು 35,500 ಎಕರೆಗ ಳೆಂದು ಹೇಳಿದ್ದರಲ್ಲಿ ಈ ಕೆರೆಯ ಕೆಳಗೆ 2 ಮೈಲಿ ಫಾಸಲೆಯಲ್ಲಿರತಕ್ಕ ಶ್ರೀ ರಾಮವೇವರ ಅಣೆಕಟ್ಟಿಗೆ ಸೇರಿರುವ ಅಚ್ಚುಕಟ್ಟನ್ನೂ ಸೇರಿಸಿ ಹೇಳಿದ್ದಾರಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ —ನೋಟೀಸ್.

Sri Y. VEERAPPA.—May I know what is the estimate for the work relating to the Gorur reservoir ?

ಶ್ರೀ ಎಚ್. ಕೆ. ವೀರಣ್ಣಗೌಡ —8½ ಕೋಟಿ ರೂಪಾಯಿಗಳು.

Sri Y. VEERAPPA.—Since how long it is being urged for the construction of the Gorur Reservoir ?

Sri H. K VEERANNA GOWDH.—ಬಹಳ ದಿವಸಗಳಿಂದಲೂ ಕೇಳುತ್ತಿದ್ದಾರೆ.

ಅಧ್ಯಕ್ಷರು.—'For the last 50 years' ಎಂದು ಹೇಳಿದ್ದಾರೆ.

Sri Y. VEERAPPA.—With reference to the answer to clause (*a*), may I know people of which area are against construction of the reservoir ?

Sri H. K. VEERANNA GOWDH.—It is quite evident. From the people of 31 villages whose lands come under submersion.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹೀಗೆ ತಕರಾರು ಬಂದಂಥ ಕೆರೆಗಳ ಕೆಲಸವನ್ನು ಯಾವುದನ್ನಾದರೂ ಬಿಟ್ಟಿದ್ದೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.— ತಮ್ಮ ಪಶ್ನೆ ಪೂರಾ ಜನರಲ್ ಆಯಿತು. ಇದಕ್ಕೆ ಸರಿಹೊಂದುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಐದು ತಾಲ್ಲೂಕು ಗಳಿಗೆ ಅನುಕೂಲವಾಗತಕ್ಕಂಥ ಈ ಕೆಲಸವನ್ನು ಸರ್ಕಾರದವರು ಇದುವರೆಗೂ ನಿಲ್ಲಿಸಿಕೊಂಡು ಬರಲು ಕಾರಣವೇನ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಕೆಲಸಕ್ಕೆ ಎಂಟು-ಹತ್ತು ಕೋಟಿ ರೂಪಾಯಿಗಳ ವೆಚ್ಚ ತಗುಲುತ್ತ ದೆಂಬ ಕಾರಣವಿಂದ ಈ ಕೆಲಸವನ್ನು ಹಿಂದಿನ ಸರ್ಕಾರ ಗಳು ಹಾಗೆಯೇ ತಳ್ಳಿಹಾಕುತಾ ಬಂದವು. ಅಷ್ಟು ರಲ್ಲೇ ಜನರ ತಕರಾರುಗಳು ಬೇರೆ ಬಂದವು. ಇದನ್ನೆಲ್ಲಾ ವಿಮರ್ಶೆ ಮಾಡಲು ಕೆಲವುಕಾಲ ಕಳೆಯಿತು. ಹೀಗೆಲ್ಲಾ ನಾನಾ ಕಾರಣಗಳಿಂದ ಈ ಪ್ರಾಜೆಕ್ಟ್ ಕೆಲಸವನ್ನು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಅವಕಾಶವಾಗಲಿಲ್ಲ.

Sri K. PUTTASWAMY.—What is the area that would come under submersion ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸುಮಾರು 16 ಸಾವಿರ ಎಕರೆ ಮುಳುಗಡೆಯಾಗುತ್ತದೆ.

Sri K. PUTTASWAMY.—What is the capacity of the anecut ?

Sri H. K. VEERANNA GOWDH.—19,253 cubic feet.

Sri K. PUTTASWAMY.—Is it not a fact that this anecut is meant to feed the Krishnarajasagar ?

Sri H. K. VEERANNA GOWDH.—I want notice.

Sri C. K. RAJAIAH SETTY.—May I know whether it is cusecs or cubic feet ?

Sri H. K. VEERANNA GOWDH.—Cubic feet.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ಅಣೆಕಟ್ಟು ಕಟ್ಟುವುದರಿಂದ ಸುಮಾರು 10 ಲಕ್ಷ ಜನ ರೈತರಿಗೆ ಅನುಕೂಲವಾಗುವುದರಿಂದ ಇದನ್ನು ಸರ್ಕಾರದವರು ಪರ್ಯಾಲೋಚನೆ ಮಾಡಿ ಜಾಗ್ರತೆ ಇಂಡಿಯಾ ಸರ್ಕಾರ ದವರಿಗೆ ಸಿಫಾರಸು ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪರ್ಯಾಲೋಚನೆ ಮಾಡಿದ್ದೇವೆ. ಎರಡನೆ ಪಂಚವಾರ್ಷಿಕ ಯೋಚನೆಯಲ್ಲಿ ಸೇರಿಸುವುದಕ್ಕೆ ಕಾಲಾತೀತವಾಗಿದೆ. ಅದಕ್ಕೋಸ್ಕರವೇ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಕ್ಕೆ ಏನೇನು ಏರ್ಪಾಡು ಮಾಡಬೇಕು ಅದನ್ನೆಲ್ಲಾ ಮಾಡಬೇಕೆಂದು ಇದೆ.

Sri V. P. DEENADAYALU NAIDU.—What is the technical opinion in this regard ? Is it in favour or against ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಅಣೆಯನ್ನು ಕಟ್ಟುವುದರಿಂದ ಹಾಕುವ ಬಂಡವಾಳಕ್ಕೆ ಶೇಕಡ ಒಂದೆ ರಷ್ಟುಕೂಡ ರಿಟರ್ನ್ಸ್ ಬರುವುದಿಲ್ಲ. ಅಗತ್ಯವಿದ್ದರೆ ಇದನ್ನು ಕಾರ್ಯಗತಮಾಡುವ ವಿಚಾರದಲ್ಲಿ ಸರ್ಕಾರದವರು ಏನೂ ನಿಧಾನಮಾಡುವುದಿಲ್ಲ. ಇತರ ಕಾರ್ಯಗಳಿಂದ ನಿಧಾನವಾಗಬಹುದು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಸಾಧ್ಯವೇ ಎಂಬುದನ್ನು ಸರ್ಕಾರದವರು ತೀವ್ರವಾಗಿ ಪರ್ಯಾಲೋಚನೆ ಮಾಡುತ್ತ ಇದ್ದಾರೆ.

ಶ್ರೀ ಪುಟ್ಟೇಗೌಡ.—ಈ ಮುಳುಗಡೆಯಾಗತಕ್ಕ ಪ್ರದೇಶವೆಲ್ಲ ಕಾಡುಪ್ರದೇಶ ಎಂಬುದುಗೊತ್ತೇ ?

ಶ್ರೀ ಎಚ್. ಕೆ. ವೀರಣ್ಣಗೌಡ —ಕಾಡು ಪ್ರದೇಶವೂ ಇದೆ, ಹಿಡುವಳಿ ಪ್ರದೇಶವೂ ಇದೆ.

ಶ್ರೀ ಪುಟ್ಟೇಗೌಡ.—ಇದನ್ನು ಸರ್ವೆಮಾಡುವುದಕ್ಕೆ ಎಷ್ಟು ಖರ್ಚಾಗಿದೆ ಸ್ವಾಮಿ ?

Mr. SPEAKER.—That is a general question.

Sri C. K. RAJAIAH SETTY.—Is Government aware that 19,500 cubic feet can never irrigate 35,253 acres?

Sri H. K. VEERANNA GOWDH.—It is a matter for technical people to tell us. But as a lay man I can say that if there is an expectation of two fills, that area can be irrigated.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಒಂದು ಪರ್ಸೆಂಟ್ ಕೂಡ yield ಬರುವುದಿಲ್ಲ ಎಂದು ಸರ್ಕಾರದವರು ಅಪ್ಪಣೆ ಕೊಡಿಸಿದರು. ಹಾಗಾದರೆ indirect ಆಗಿ ಇದನ್ನು ತೆಗೆದುಕೊಳ್ಳಕೂಡದು ಎಂದು ಹೇಳಿದ ಹಾಗಾಗಲಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪರ್ಸೆಂಟೇಜ್ ಮೇಲೆ ಸರ್ಕಾರ ತೀರ್ಮಾನ ಮಾಡುವುದಿಲ್ಲ. ಅಗತ್ಯವಾಗಿದ್ದರೆ ಪರ್ಸೆಂಟೇಜ್ ಕಡಮೆಯಾದರೂ ಮಾಡುತ್ತೇವೆ ಎಂದು ಹೇಳಿದೆನಲ್ಲಾ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—35 ಸಾವಿರ ಎಕರೆ ಅಚ್ಚುಕಟ್ಟು ಆಗುವುದರಲ್ಲಿ, ತುಮಕೂರು ಜಿಲ್ಲೆಯ ಅನೇಕ ಕೆರೆಗಳಿಗೆ ಅಪ್ರತ್ಯಕ್ಷವಾಗಿ ಪ್ರಯೋಜನವಾಗುತ್ತದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಪ್ರಶ್ನೆಗೆ ಬೇಕಾದರೆ ವರ್ತಮಾನ ತರಿಸುತ್ತೇನೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಹೆಚ್ಚು ಪ್ರಯೋಜನವಾಗತಕ್ಕ ಈ ಒಂದು ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಅಂತ್ಯವಾಗಿ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳುತ್ತೀರಾ, ಸ್ವಾಮಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ತೆಗೆದುಕೊಳ್ಳುವ ವಿಚಾರದಲ್ಲಿ ಯೋಚನೆಮಾಡಿ ನೋಡುತ್ತಾ ಇದ್ದೇವೆ ಎಂದು ಹೇಳಿದೆನಲ್ಲಾ.

ಶ್ರೀ ಬಿ. ಎಸ್. ಬೋರಣ್ಣಗೌಡ.—16 ಸಾವಿರ ಎಕರೆ ಉತ್ಕೃಷ್ಟವಾದ ತರಿ ಜಮೀನು ಮುಳುಗಡೆಗೆ ಬರುತ್ತದೆ ಎಂಬುದು ಗೊತ್ತೆ?

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದರು.

ಶ್ರೀ ಬಿ. ಎಸ್. ಬೋರಣ್ಣಗೌಡ.—ಕಾಡು ಪ್ರದೇಶದಲ್ಲಿರತಕ್ಕ ಎಷ್ಟು ಎಕರೆ ಖುಷ್ಕಿ ಜಮೀನು ತರೀ ಆಗುತ್ತದೆ ಎಂಬುದನ್ನು ಹೇಳಬಲ್ಲಿರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಮಾಚಾರ ತರಿಸಬೇಕು.

ಶ್ರೀ ಬಿ. ಎಸ್. ಬೋರಣ್ಣಗೌಡ.—ನಮ್ಮಲ್ಲಿರತಕ್ಕ ಎಷ್ಟೋ ಉತ್ಕೃಷ್ಟವಾಗಿರತಕ್ಕ ತರೀ ಜಮೀನುಗಳು ಮುಳಗಡೆಯಾಗುವುದರಿಂದ ಈ ಕಟ್ಟೆ ಕಟ್ಟುವುದನ್ನು ಮನ್ನಾ ಮಾಡುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ತಕರಾರಿನಿಂದಲೇ ಸ್ವಲ್ಪ ನಿಧಾನವಾಗಿದೆ.

Allotment of Land to Owners of Submerged Lands.

Q.—126. Sri D. T. SEETHARAMA RAO (Bhadravati).—

Will the Government be pleased to state:—

(*a*) which parts of land in the atchkat under the left and the right channels in Bhadravati Taluk would be allotted to those whose lands have been submerged under the Bhadra Project?

(*b*) whether they would grant lands to persons, as in the case of owners of submerged lands, who have lost lands in the territory through which the channel passes;

(*c*) whether they would allot lands to the landless persons of the neighbouring villages of the channel in preference to any other person?

A.—Sri H. K. VEERANNA GOWDH (Minister for Public Works).—

(*a*) A recommendation has been received about the reservation of lands up to 10 miles of the Left Bank Low Level Channel of the Bhadra Reservoir Project for grant to the ryots whose lands come under submersion.

(*b*) This will be considered.

(*c*) Preference will be given to the ryots whose lands come under submersion under Tunga, Bhadra and Sharavathy Projects. Separate rules are being issued as regards grant of Government lands to landless persons.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ಭದ್ರಾ ಎಡನಾಲೆಯಲ್ಲಿ ಈಗ ನೀರು ಬಿಟ್ಟಿದೆ ಅಲ್ಲವೇ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಬಿಟ್ಟಿದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ನಾಲೆಯಿಂದ 10 ಮೈಲಿಯವರೆಗೂ ರಿಸರ್ವ್ ಮಾಡಲಾಗಿದೆ ಎಂದು ಇಲ್ಲಿ ಪ್ರಕಟವಾಗಿದೆ. ಇಂಥಿಂಥ ಕಡೆಯಲ್ಲ, ಹತ್ತು ಮೈಲಿದೂರದಲ್ಲಿ ಇಂಥಿಂಥಾ ಪ್ರದೇಶದಲ್ಲಿ ಎಂದು ನಿಗದಿ ಮಾಡಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸರ್ವೇಮಾಡಿ ಇಂಥಿಂಥ ಪ್ರದೇಶ ಯಾವುದು ಎಂಬುದನ್ನು ತಿಳಿಸುತ್ತಾರೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಹಾಗೆ ನಿಗದಿ ಮಾಡಿ ಉಳಿದ ಜಮೀನನ್ನು ಆ ಹತ್ತು ಮೈಲಿ ಪ್ರದೇಶದಲ್ಲಿ ಯಾರುಯಾರಿಗೆ ಜಮೀನಿಲ್ಲವೋ ಅಂತಹವರಿಗೆ ಕೊಡುವ ವ್ಯವಸ್ಥೆ ಇಟ್ಟುಕೊಂಡಿದ್ದೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಂತಹವರಿಗೆ ಕೊಡಬೇಕೆಂತಲೇ ತಿರ್ಮಾನವಾಗಿರುವುದು.

ಶ್ರೀ ಡಿ. ಟಿ. ಸೀತಾರಾಮರಾವ್.—ಈಗ ನೀರು ಬಿಟ್ಟಿರುವುದರಿಂದ ಮುಳುಗಡೆಯಾದವರಿಗೆ ಅದಷ್ಟು ಬೇಗ ಜಮೀನು ಕೊಟ್ಟರೆ ಸರ್ಕಾರದವರಿಗೆ ಉತ್ಪನ್ನ ಬರುತ್ತದೆ, ತಡಮಾಡಕೂಡದು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಡಮಾಡಬೇಕೆಂಬ ಅಭಿಪ್ರಾಯ ಸರ್ಕಾರದವರಿಗೆ ಲೇಶಾಂಶವೂ ಇಲ್ಲ.

Sri A. R. BADRI NARAYAN.—What is the acreage available within ten miles of the Left Bank?